ಸ್ಯೂಪರ್ ಜನಮನ
ಪುಟಗಳ ವಿನ್ಯಾಸ: ಎಂ.ಎಸ್. ಅಪೂರ್ವ

ಕಣಕ



ಕುಡಿನೋಟದ ಕನ್ನಡಕ ತೆರೆಯುತ್ತದೆ ಡಿಜಿಲೋಕ

ಗೂಗಲ್ ಗ್ಲಾಸ್

ಕೊಳ್ಳೇಗಾಲ ಶರ್ಮ

ಇಂಗ್ಲೆಂಡಿನ ಸಿನೆಮಾ ಥಿಯೇಟರುಗಳಲ್ಲಿ ಈಗ ಪ್ರೇಕ್ಷಕರ ಕಣ್ಣಿನ ಮೇಲೆ ಕಾವಲಿಡುತ್ತಿದ್ದಾರಂತೆ. ಏನಪ್ಪಾ ಇದು ವಿಚಿತ್ರ ಎನ್ನಬೇಡಿ. ಪ್ರೇಕ್ಷಕರು ಎಲ್ಲಿಯಾದರೂ ಗೂಗಲ್ ಗ್ಲಾಸ್ ಧರಿಸಿ ಬಂದು ತೆರೆಯ ಮೇಲಿನ ಸಿನೆಮಾವನ್ನೇ ಕದಿಯುತ್ತಿರಬಹುದು ಎಂದು ಈ ಎಚ್ಚರಿಕೆ.

ಸಿನೆಮಾ ಕದಿಯುವುದೇ? ಇದೇನು ವಿಚಿತ್ರ ಎಂದಿರಾ! ಹೌದು. ಇದೀಗ ಮುಕ್ತ ಮಾರುಕಟ್ಟೆಯಲ್ಲಿ ಮಾರಾಟವಾಗುತ್ತಿರುವ ಗೂಗಲ್ ಗ್ಲಾಸ್ ಇಂತಹುದೊಂದು ತೊಂದರೆ ತರಬಹುದಂತೆ. ಏನಿದು ಗೂಗಲ್ ಗ್ಲಾಸ್? ಇಂಟರ್‌ನೆಟ್‌ನಲ್ಲಿ ಸರ್ವಾಂತರ್ಯಾಮಿಯಾಗಿರುವ ಗೂಗಲ್ ಕಂಪೆನಿಯ ಹೊಸ ಸಾಧನ. ಸ್ಮಾರ್ಟ್ ಫೋನ್ ಜೊತೆಗೆ, ಒಂದು ಕನ್ನಡಕ, ಮುಟ್ಟಿದರೆ ಮುಲುಗುವ ಟಚ್ ಸ್ಕ್ರೀನ್, ತಂತಿಯಿಲ್ಲದೆ ಫೋನ್‌ಗೆ ಬೆಸೆದುಕೊಳ್ಳುವ ಬ್ಲೂ ಟೂತ್ ತಂತ್ರಜ್ಞಾನ ಹಾಗೂ ಒಂದು ವಿಶಿಷ್ಟ, ಪುಟ್ಟ ಪ್ರೊಜೆಕ್ಟರ್: ಇವೆಲ್ಲವನ್ನೂ ಸರಿಯಾಗಿ ಜೋಡಿಸಿದರೆ ಸಿಗುವುದೇ ಗೂಗಲ್ ಗ್ಲಾಸ್. "ಧರಿಸಬಹುದಾದ ಗಣಕಯಂತ್ರ" ಎಂದು ಇದನ್ನು ಹಾಡಿ ಹೊಗಳುತ್ತದೆ ಗೂಗಲ್. ಅರ್ಥಾತ್ ಕಣ್ಣಂಚಿನ ಕಂಪ್ಯೂಟರ್.

ನೋಡಲು ಕನ್ನಡಕದಂತೆಯೇ ಇರುವ ಗ್ಲಾಸನ್ನು ಮೂಗಿನ ಮೇಲೆ ಏರಿಸಿ ಸವಾರಿ ಹೊರಟಿರೆಂದರೆ ನಿಮ್ಮ ಕಣ್ಣಿಗೆ ಕಾಣದ ಜಗತ್ತನ್ನೂ ನೋಡುತ್ತ ಸಾಗಬಹುದು. ಅರ್ಥವಾಗಲಿಲ್ಲವೇ! ಚಾಮುಂಡಿ ಬೆಟ್ಟಕ್ಕೆ ಪ್ರವಾಸ ಹೊರಟಿದ್ದೀರಿ ಎಂದರೆ ಜೊತೆಗೆ ಕ್ಯಾಮೆರಾ, ನೋಟ್ ಪುಸ್ತಕ ಏನನ್ನೂ ಕೊಂಡೊಯ್ಯಬೇಕಿಲ್ಲ. ಗೂಗಲ್ ಗ್ಲಾಸ್ ಏರಿಸಿ ಕೈಬೀಸಿಕೊಂಡು ನಡೆಯಬಹುದು. ಬೆಟ್ಟ ಹತ್ತುವ ಹಾದಿಯಲ್ಲಿ ಕಣ್ಣಿಗೆ ಕಾಣುವ ದೃಶ್ಯಗಳ ಚಿತ್ರ ಬೇಕೇ? ಕನ್ನಡಕದ ಮುಂದಿರುವ ಗುಂಡಿಯನ್ನು ಸವರಿದರೆ ಸಾಕು. ಅದೋ ಅಲ್ಲಿದೆಯಲ್ಲ, ನಂದಿ. ಅದರ ಚರಿತ್ರೆ ಏನು ಎಂದು ಸಂದೇಹ ಬಂತೆ? "ಗ್ಲಾಸ್, ಅದೇನದು?" ಎಂದು ಪ್ರಶ್ನಿಸಿ. ನೀವು ನೋಡುತ್ತಿರುವ ನಂದಿಯ ಮೇಲೇ ಅದರ ಚರಿತ್ರೆ ತೆರೆದುಕೊಳ್ಳುತ್ತದೆ. ಖುಷಿಯಾದರೆ, ನಂದಿಯ ಸುತ್ತ ನಡೆದಾಡಿ, ಚಲನಚಿತ್ರವನ್ನೂ ತೆಗೆಯಬಹುದು. ಗ್ಲಾಸ್‌ಗೆ ಆಣತಿ ಕೊಟ್ಟರೆ ಸಾಕು. ಇಂತಹುದೇ ನಂದಿಗಳು ಇನ್ನೆಲ್ಲಿಯಾದರೂ ಇವೆಯೇ ಎನ್ನುವ ಅನುಮಾನವನ್ನೂ ಅಲ್ಲಿಯೇ ಪರಿಹರಿಸಿಕೊಳ್ಳಬಹುದು. ತಂಜಾವೂರು, ಬೇಲೂರು, ಹಳೇಬೀಡಿನ ನಂದಿಗಳನ್ನು ಚಾಮುಂಡಿ ಬೆಟ್ಟದ ನಂದಿಯ ಜೊತೆಗೆ ಹೋಲಿಸಿ ನೋಡಬಹುದು.

'ಒಳ್ಳೆ ಕತೆ!' ಎನ್ನಬೇಡಿ. ಇದು ವಾಸ್ತವ ಜಗತ್ತಿನ ಮೇಲೆ ಗೂಗಲ್ ತೆರೆಯುವ ಭ್ರಮಾಲೋಕದ ಕರಾಮತ್ತು. ಕೇವಲ 50 ಗ್ರಾಂ ತೂಗುವ ಕನ್ನಡಕ ಇಷ್ಟೆಲ್ಲವನ್ನೂ ಮಾಡುತ್ತದೆ ಅಂದರೆ ಅದು ಭ್ರಮೆಯೇ ಸರಿ. ಆದರೆ ಇದು ವಾಸ್ತವ. ಗೂಗಲ್ ಗ್ಲಾಸ್ ಈಗ ಕೇವಲ ಕುತೂಹಲದ, ಪರೀಕ್ಷೆಯ ಸಾಧನವಾಗಿ ಉಳಿದಿಲ್ಲ. ಮಾರುಕಟ್ಟೆಯಲ್ಲಿ ಮಾರಾಟಕ್ಕಿರುವ ವಸ್ತು.

ಐದು ವರ್ಷಗಳ ಹಿಂದೆ ಹೀಗೊಂದು ಕನ್ನಡಕವನ್ನು ತಯಾರಿಸಲಿದ್ದೇವೆ ಎಂದು ಗೂಗಲ್ ಹೇಳಿಕೊಂಡಾಗ ಹುಬ್ಬು ಏರಿಸಿದವರು ಬಹಳ ಮಂದಿ ಇದ್ದರು. ಇದು ಸಾಧ್ಯವೇ? ಅಂಗೈಯೊಳಗೆ ಹುದುಗುವ ಸ್ಮಾರ್ಟ್‌ಫೋನ್‌ನ ತೆರೆಯಲ್ಲಿ ಕಾಣುವುದನ್ನೇ ಓದುವುದು ಕಷ್ಟ. ಹೀಗಿರುವಾಗ, ಕನ್ನಡಕದ ಮೂಲೆಯಲ್ಲಿರುವ ಗಾಜಿನಲ್ಲಿ ಏನು ಕಂಡೀತು ಎನ್ನುವ ಕುಹಕವೂ ಇತ್ತೆನ್ನಿ. ಆದರೆ ಅದ್ಭುತ ತಂತ್ರಜ್ಞಾನದ ನೆರವಿನಿಂದ ಗೂಗಲ್ ಅದನ್ನು ಸಾಧಿಸಿದೆ.

ಏನಿದೆ ಈ ಗೂಗಲ್ ಗ್ಲಾಸ್‌ನಲ್ಲಿ? ಟೈಟಾನಿಯಂ ಲೋಹದಿಂದ ಮಾಡಿದ ವಿಶೇಷ ಕನ್ನಡಕದ ಚೌಕಟ್ಟಿನಲ್ಲಿ ಅತಿ ಸೂಕ್ಷ್ಮವಾದ ಇಲೆಕ್ಟ್ರಾನಿಕ್ ಸಾಧನಗಳನ್ನು ಅಡಗಿಸಿ ಈ ಕಣ್ಣಂಚಿನ ಕಂಪ್ಯೂಟರನ್ನು ರಚಿಸಿದ್ದಾರೆ. ಇತ್ತೀಚಿನ ಗೂಗಲ್ ಗ್ಲಾಸ್‌ನಲ್ಲಿ ಎರಡು ಜಿಬಿ ರ್‍ಯಾಮ್ ಇದೆ. ಕನ್ನಡಕದ ಚೌಕಟ್ಟು ಸ್ಮಾರ್ಟ್‌ಫೋನ್‌ನ ಪರದೆಯ ಹಾಗೆ ನಿಮ್ಮ ಸ್ಪರ್ಶಕ್ಕೆ ಸಂವೇದಿಸುತ್ತದೆ. ಒಮ್ಮೆ ತಟ್ಟಿದರೆ ಗ್ಲಾಸ್ ಅನ್ನು ಚೇತನಗೊಳಿಸುತ್ತದೆ. ಎಚ್ಚೆತ್ತ ಗ್ಲಾಸ್‌ನಲ್ಲಿ ಸ್ಮಾರ್ಟ್ ಫೋನ್‌ನಲ್ಲಿರುವಂತೆ ಮೆನು (ಆದೇಶಗಳ ಪಟ್ಟಿ) ತೆರೆದುಕೊಳ್ಳುತ್ತದೆ. ಹಾಗಂತ ನೀವು ಕಣ್ಣು ಕದಲಿಸಬೇಕಿಲ್ಲ. ನಿಮ್ಮೆದುರಿಗಿರುವ ನೋಟದ ಹಿನ್ನೆಲೆಯಲ್ಲಿಯೇ ಈ ಆದೇಶವೂ ಕಾಣಿಸುತ್ತದೆ. ಬೇಕೆಂದ ಕಾರ್ಯವನ್ನು ಆಯ್ದುಕೊಂಡು ನಿರ್ದೇಶ ನೀಡಬಹುದು. ಕನ್ನಡಕವನ್ನು ಸವರುವುದು ಕಠಿಣ ವ್ಯಾಯಾಮ ಎನ್ನಿಸಿದಲ್ಲಿ ನೇರವಾಗಿ ಗ್ಲಾಸ್‌ಗೆ ಆಣತಿ ನೀಡಬಹುದು. ಗ್ಲಾಸ್ ಅನ್ನು ವಾಕ್ ಚತುರನನ್ನಾಗಿಸಿದೆ ಗೂಗಲ್. ಮಕ್ಕಳಿಗೆ ಹೇಳುವಂತೆ ನೀವು ಆದೇಶಗಳನ್ನು ಹೇಳಿ ಅದನ್ನು ಚಾಲಿಸಬಹುದು.

ಇವೆಲ್ಲವೂ ಸ್ಮಾರ್ಟ್‌ಫೋನ್‌ನಲ್ಲಿ ಇರುವ ಸಾಮರ್ಥ್ಯವಷ್ಟೆ. ಗೂಗಲ್‌ನ ಹೆಚ್ಚಳಿಕೆ ಏನಿದೆ ಇದರಲ್ಲಿ ಎಂದಿರಾ? ಅದುವೇ ಗ್ಲಾಸ್‌ನ ಪುಟ್ಟ ತೆರೆ. ಇದು ಕನ್ನಡಕದ ಮೇಲಿನ ಮೂಲೆಯಲ್ಲಿರುವ ಕಿರುಬೆರಳಿನ ಮೊನೆಯಷ್ಟು ಪುಟ್ಟ ಗಾಜಿನ ತುಂಡು. ಆದರೆ ಅಂತಿಂತಹ ಗಾಜಲ್ಲ. ವಿಶೇಷ ಹರಳಿನ ಗಾಜು. ಸ್ಫಟಿಕದಷ್ಟು ನಿಚ್ಚಳ. ಇದರಾಚೆಗಿನ ನೋಟಗಳೆಲ್ಲ ಸ್ಪಷ್ಟವಾಗಿ ಗೋಚರಿಸುತ್ತವೆ. ಕನ್ನಡಕದ ಬದಿಯಲ್ಲಿರುವ ಪುಟ್ಟ ರಂಧ್ರದ ಮೂಲಕ ಒಂದು ಪ್ರೊಜೆಕ್ಟರ್ ಈ ಗಾಜಿನೊಳಗೆ ಹುದುಗಿಸಿರುವ ವಿಶಿಷ್ಟ ಕನ್ನಡಿಯ ಮೇಲೆ ಬಿಂಬವನ್ನು ಮೂಡಿಸುತ್ತದೆ. ಈ ಕನ್ನಡಿ, ಕನ್ನಡಿಯಲ್ಲ. ಬದಲಿಗೆ ಬೆಳಕಿನ ವಿವಿಧ ತರಂಗಾಂತರಗಳನ್ನು ಬಿಡಿಸುವ ಧ್ರುವೀಕರಣ ಸಾಧನ ಕೂಡ. ಇದು ತನ್ನ ಮೇಲೆ ಬಿದ್ದ ಬಿಂಬವನ್ನು ಹೊರಳಿಸಿ, ಕಣ್ಣೊಳಗೆ ಹಾಯಿಸುತ್ತದೆ.

ಅರ್ಥಾತ್, ಕಣ್ಣೇ ಕಂಪ್ಯೂಟರ್ ತೆರೆಯಾಗುತ್ತದೆ. ಗಾತ್ರದಲ್ಲಿ ಪುಟ್ಟದಾಗಿದ್ದರೂ, ಸಮೀಪದಲ್ಲಿರುವುದರಿಂದ ಕಣ್ಣಿಗೆ ದೊಡ್ಡ ಬಿಂಬವೇನೋ ಎನ್ನುವ ಭ್ರಮೆ ಆಗುತ್ತದೆ. ಕತ್ತಲ ಕೋಣೆ ಬೇಕಿಲ್ಲ. ತೂಕದ ತೆರೆಯ ಅವಶ್ಯಕತೆಯಿಲ್ಲ. ಸ್ಮಾರ್ಟ್‌ಫೋನ್ ತೆರೆಯಲ್ಲಿ ಕಾಣುವ ಎಲ್ಲವನ್ನೂ ಇಲ್ಲಿ ಕಾಣಬಹುದು. ಆಂಡ್ರಾಯಿಡ್, ಆಪಲ್‌ನ ಐಫೋನ್, ಹಾಗೂ ಸ್ಯಾಮ್‌ಸಂಗ್‌ನ ಫೋನ್‌ಗಳ ಜೊತೆಗೆ ಹೊಂದಿಕೊಳ್ಳುವ ಗೂಗಲ್ ಗ್ಲಾಸ್‌ಗೆ ಸ್ಮಾರ್ಟ್‌ಫೋನ್ ಜೊತೆ ಬೇಕೇ ಬೇಕು.


ಇಷ್ಟೇಯೋ? ಇಲ್ಲ. ಇನ್ನೂ ಇದೆ. ಈ ಕನ್ನಡಕದಲ್ಲಿ ಸದ್ದು ಹೊರಡಿಸುವ ಸ್ಪೀಕರೇ ಇಲ್ಲ. ಕನ್ನಡಕದ ಕಿವಿಗಡ್ಡಿ ನೇರವಾಗಿ ಒಳಗಿವಿಯನ್ನು ತಾಕಿಕೊಂಡು ಕೂರುತ್ತದೆ. ಸದ್ದೆಲ್ಲವನ್ನೂ ಕಂಪನವನ್ನಾಗಿಸಿ, ಕಿವಿಗೆ ನೇರವಾಗಿ 'ಮುಟ್ಟಿಸುತ್ತದೆ'. ಹಾಡು ಧ್ವನಿಸುತ್ತದೆ. ಹೀಗಾಗಿ, ನೀವು ಎಷ್ಟೇ ಜೋರಾಗಿ ಹಾಡು ಕೇಳಿದರೂ ಪಕ್ಕದಲ್ಲಿರುವವರಿಗೆ ಸುಳಿವೂ ಗೊತ್ತಾಗುವುದಿಲ್ಲ. ನೀವು ಸಹಜವಾಗಿಯೇ ಕನ್ನಡಕಧಾರಿಗಳಾಗಿದ್ದರೂ, ಈ ಗ್ಲಾಸ್ ನಿಮಗೆ ಅಡ್ಡಿಯಾಗುವುದಿಲ್ಲ. ನಿಮ್ಮ ಕನ್ನಡಕಕ್ಕೇ ಈ ಕಣ್ಣಂಚಿನ ಕನ್ನಡಕವನ್ನು ಜೋಡಿಸಿ ಬಿಡಬಹುದು.


ಗೂಗಲ್ ಗ್ಲಾಸ್ ಬಳಸಿ ಏನೇನು ಮಾಡಬಹುದು ಎನ್ನುವುದನ್ನು ಗೂಗಲ್ ತಿಳಿದುಕೊಂಡಿದ್ದೂ ಸ್ವಾರಸ್ಯಕರ. ಆರಂಭದ ಹಂತದಲ್ಲಿಯೆ ಕೆಲವರನ್ನು ಆಯ್ದು ಅವರಿಗೆ ಉಚಿತವಾಗಿ ಗ್ಲಾಸ್ ನೀಡಿದ ಗೂಗಲ್ ಅವರು ಅದನ್ನು ಹೇಗೆ ಬಳಸಿಕೊಂಡರು ಎಂದು ವಿಚಾರಿಸಿತು. ನೇಪಾಳದ ಕಾಡುಗಳಲ್ಲಿ ಅಲೆದಾಡುವಾಕೆ, ಅಲ್ಲಿನ ಆನೆಗಳ ಮೇಲೆ ಸವಾರಿ ಮಾಡುತ್ತ ಕಾಡಿನ ಬಗ್ಗೆ ತನ್ನ ಅನಿಸಿಕೆಯನ್ನು ಆ ಕೂಡಲೇ ಜಗತ್ತಿಗೆ ಜಗಜ್ಜಾಹೀರು ಮಾಡಿದಳು. ಪುಸ್ತಕ ಬೇಡದೆ, ನೇರವಾಗಿ ತಾನು ಕಂಡು, ಅನುಭವಿಸಿದ್ದನ್ನೆಲ್ಲ ಚಿತ್ರೀಕರಿಸಿ, ಮಾತುಗಳಲ್ಲಿ ದಾಖಲಿಸಿದಳು. ಮತ್ತೊಬ್ಬ ಅಡುಗೆಮನೆಯಲ್ಲಿ ತನ್ನ ಸಾಹಸವನ್ನೆಲ್ಲ ಚಿತ್ರೀಕರಿಸಿ ಹಂಚಿಕೊಂಡ. ವೈದ್ಯನೊಬ್ಬ ಶಸ್ತ್ರಕ್ರಿಯೆಯ ವೇಳೆ ಗೂಗಲ್ ಗ್ಲಾಸ್ ನೆರವಿನಿಂದ ದೂರದಲ್ಲೆಲ್ಲೋ ಇರುವ ತನ್ನ ಸಹೋದ್ಯೋಗಿಯಿಂದ ಸಲಹೆಯನ್ನೂ ಪಡೆದುಕೊಂಡ. ಹೀಗೆ ಅವರವರ ಭಾವಕ್ಕೆ, ಆಸಕ್ತಿಗೆ ತಕ್ಕಂತೆ ಗ್ಲಾಸ್ ಬಳಸಬಹುದು ಎನ್ನುತ್ತದೆ ಗೂಗಲ್.

ಇವೆಲ್ಲವೂ ಸರಿ. ಇಷ್ಟು ಹತ್ತಿರದಿಂದ ಚಿತ್ರಗಳನ್ನು ನೋಡುವುದು ಹಾನಿಕರವಲ್ಲವೇ ಎನ್ನುವ ಪ್ರಶ್ನೆ ಸಹಜವೇ! ಗೂಗಲ್ ಗ್ಲಾಸ್ ಧರಿಸಿದ ಆರಂಭದಲ್ಲಿ ಅದು ಬಹುತೇಕ ಮಂದಿಗೆ ತಲೆನೋವುಂಟು ಮಾಡಿತಂತೆ. ಏಕೆಂದರೆ ಒಂದು ಕಣ್ಣನ್ನು ಮೇಲೆ ದೃಷ್ಟಿಸಿ, ಮತ್ತೊಂದನ್ನು ಸಹಜವಾಗಿಟ್ಟುಕೊಳ್ಳುವುದು ಸುಲಭವಲ್ಲ. ನಾಲ್ಕೈದು ಗಂಟೆಗಳ ಕಾಲ ಎಡೆಬಿಡದೆ ಇದನ್ನು ಉಪಯೋಗಿಸಿದವರು ಕಡಿಮೆ.

ಆದರೂ, ನೇರವಾಗಿ ಕಣ್ಣೊಳಗೇ ಬಿಂಬವನ್ನು ಮೂಡಿಸುವುದರಿಂದ ಏನಾದರೂ ಸಮಸ್ಯೆಗಳು ಉಂಟಾಗುತ್ತವೆಯೋ ಎನ್ನುವ ಪ್ರಶ್ನೆಗೆ ಇನ್ನೂ ಉತ್ತರ ಸಿಕ್ಕಿಲ್ಲ. ಇಷ್ಟೆಲ್ಲ ಸಾಮರ್ಥ್ಯವಿರುವ ಗ್ಲಾಸ್, ಅಂಧರಿಗೂ, ಮೂಗರಿಗೂ ನೆರವಾಗುವುದಿಲ್ಲ ಎನ್ನುವುದು ವಿಷಾದದ ಸಂಗತಿ.

ಪರವಾಗಿಲ್ಲ ಬಿಡಿ. ನಾನೂ ಒಂದು ಕೊಂಡುಕೊಳ್ಳುತ್ತೇನೆ ಎಂದಿರಾ? ತಾಳಿ. ಗೂಗಲ್ ಗ್ಲಾಸ್ ಅನ್ನು ಹಲವು ಕಡೆ ನಿಷೇಧಿಸಲಾಗಿದೆ. ಅಮೆರಿಕೆಯ ಹಲವು ರಾಜ್ಯಗಳಲ್ಲಿ ಇದನ್ನು ತೊಟ್ಟು ವಾಹನ ಚಲಾಯಿಸುವುದು ನಿಷಿದ್ಧ. ಇಂಗ್ಲೆಂಡಿನಲ್ಲಿ ಇದನ್ನು ಧರಿಸಿ ಸಿನೆಮಾ ಪ್ರವೇಶಿಸುವ ಹಾಗಿಲ್ಲ. ಅಮೆರಿಕೆಯ ಸುಪ್ರಸಿದ್ಧ ಕ್ಯಾಸಿನೋಗಳಲ್ಲಿ ಇದು ಕಾನೂನು ಬಾಹಿರ ತೊಡುಗೆ. ಏಕೆಂದರೆ ಇದನ್ನು ಧರಿಸಿ ಜೂಜಾಟದಲ್ಲಿ ಮೋಸ ನಡೆಯಬಹುದು ಎನ್ನುವ ಭಯ. ಇನ್ನು ಭಾರತದಲ್ಲಿ. ಕಾನೂನಿನ ಮಾತು ಬಿಡಿ. ಸದ್ಯಕ್ಕೆ ಕಾಸೇ ಇದನ್ನು ನಿಷೇಧಿಸಿದೆ. ಕಡಿಮೆ ಎಂದರೆ ಒಂದು ಲಕ್ಷ ರೂಪಾಯಿ ಬೆಲೆಯುಳ್ಳ ಈ ಗಾಜನ್ನು ಕೊಳ್ಳುವುದೆಂದರೆ ತಲೆನೋವನ್ನು ದುಬಾರಿ ಬೆಲೆಕೊಟ್ಟು ಖರೀದಿಸಿದಂತೆಯೇ ಸರಿ.






ಮಾಟದ ಆಟಿಕೆ

ಗೋಜಲಿಸುವ ಸೂತ್ರಗಳು

ರೂಬಿಕ್ ಕ್ಯೂಬ್ ಆಟಿಕೆಯನ್ನು ಗಂಭೀರವಾಗಿ ಪರಿಗಣಿಸುವವರು ಸ್ಕ್ರ್ಯಾಂಬ್ಲಿಂಗ್ ಮಾಡಲು ಕೆಲವು ಸೂತ್ರಗಳನ್ನು ಬಳಸುತ್ತಾರೆ. ಆಲ್ಗೊರಿದಂ ಎಂದು ಕ್ಯೂಬಿಗರು ಕರೆಯುವ ಈ ಸೂತ್ರಗಳು ಕ್ಯೂಬ್‌ನ್ನು ಯಾವ ರೀತಿ ಗೋಜಲಿಸಲಾಗಿದೆ ಎನ್ನುವುದನ್ನು ತಿಳಿಸುತ್ತವೆ. ಈ ಸೂತ್ರಗಳು ಕ್ಯೂಬ್‌ನ ಸಾಲುಗಳನ್ನು ಯಾವ ರೀತಿಯಲ್ಲಿ ತಿರುಗಿಸಿದ್ದೇವೆ ಎನ್ನುವುದನ್ನು ತಿಳಿಸುವ ಸಂಕೇತಗಳಷ್ಟೆ.



R1 ಪಲ್ಲಟನ: ಚಿತ್ರ 1

ಉದಾಹರಣೆಗೆ ಚಿತ್ರ 1 ನೋಡಿ. ಇದರಲ್ಲಿ ಕ್ಯೂಬ್‌ನ ಬಲಬದಿಯ ಕಂಭಸಾಲನ್ನು ಕಾಲು ಸುತ್ತು ಅಥವಾ 90 ಡಿಗ್ರಿ ಪಲ್ಲಟಿಸಲಾಗಿದೆ. ಇದನ್ನು R1 ಎಂದು ಗುರುತಿಸುತ್ತಾರೆ. ಅಂದರೆ ಬಲಬದಿಯ ಕಂಭಸಾಲನ್ನು ಒಂದು ಹೆಜ್ಜೆ ಕದಲಿಸಿದ್ದೇವೆ ಎಂದರ್ಥ. ಇದನ್ನು ಇನ್ನೂ 90 ಡಿಗ್ರಿ ಕದಲಿಸಿದರೆ ಆಗ ಅದು R2 ಎಂದಾಗುತ್ತದೆ. ಮೂರು ಹೆಜ್ಜೆ ಕದಲಿಸಿದರೆ R3 ಎಂದಾಗುತ್ತದೆ. R4 ಎನ್ನುವುದು ಇಲ್ಲ. ಏಕೆಂದರೆ ಈ ಸ್ಥಿತಿ ಆರಂಭದ ಹಂತದಲ್ಲಿ ಇದ್ದ ರೀತಿ.


ಇಲ್ಲಿ ಒಂದು ಅಂಶವನ್ನು ಗಮನದಲ್ಲಿಡಬೇಕು. ಕಂಭಸಾಲನ್ನು ಗಡಿಯಾರದ ಮುಳ್ಳುಗಳು ತಿರುಗುವ ದಿಕ್ಕಿನಲ್ಲಿ, ಅಂದರೆ ಪ್ರದಕ್ಷಿಣೆಯ ದಿಕ್ಕಿನಲ್ಲಿ (Clockwise) ತಿರುಗಿಸಿದಾಗ ಅದನ್ನು R1 ಎನ್ನುತ್ತೇವೆ. ವಿರುದ್ಧ ದಿಕ್ಕಿನಲ್ಲಿ, ಅಂದರೆ ಅಪ್ರದಕ್ಷಿಣವಾಗಿ ತಿರುಗಿಸಿದರೆ ಅದನ್ನು R' (ಆರ್ ಪ್ರೈಮ್) ಎನ್ನುತ್ತೇವೆ.

ಇದು ಮೂಲ ಸಂಕೇತ. ಮಧ್ಯದ ಕಂಭಸಾಲಿಗೆ M (middle), ಎಡಗಡೆಯ ಕಂಭಸಾಲಿಗೆ L (left) ಎಂದು ಸಂಕೇತಿಸಲಾಗುತ್ತದೆ. ಅಡ್ಡಸಾಲುಗಳಲ್ಲಿ ತಳದಲ್ಲಿರುವುದನ್ನು D (down), ನಡುವಿನಲ್ಲಿರುವುದನ್ನು E (equator), ಮೇಲಿನದನ್ನು U (up) ಎಂದು ಗುರುತಿಸಲಾಗುತ್ತದೆ. ಇನ್ನು ಮುಂಭಾಗದ ಬದಿಯನ್ನು F (front), ಹಿಂಭಾಗದ ಬದಿಯನ್ನು B, ಮತ್ತು ನಡುವಿನದನ್ನು S ಎಂದು ಕರೆಯುತ್ತಾರೆ.

ಈಗ ಈ ಆಲ್ಗೊರಿದಂ ನೋಡಿ. RUR'U'. ಇದನ್ನು ಆರು ಬಾರಿ ಮಾಡಿದಾಗ ಮೊದಲಿನ ಸ್ಥಿತಿಗೇ ಮರಳುತ್ತೇವೆ. ಹೀಗೆಯೇ R'FRF' ಅನ್ನು ಆರು ಬಾರಿ ಮಾಡಿದಾಗ ಮೊದಲಿನ ಸ್ಥಿತಿಗೇ ಮರಳುತ್ತೇವೆ.


ಗೋಜಲನ್ನು ಬಿಡಿಸುವಾಗ ಒಂದು ವಿಷಯವನ್ನು ಗಮನದಲ್ಲಿಡಬೇಕು.

ಚಿತ್ರಲೇಖನ – ರೇವಂತ್



ವಿವಿಧ ಸಂಕೇತಗಳು
ಚಿತ್ರ 2

ಚಿತ್ರ–ವಿಶೇಷ



ಏನಿದು? ಮಕ್ಕಳಾಟದ ಗಾಜಿನ ಕೊಳವೆಯೇ? ಮುತ್ತಿನ ಹನಿಗಳೇ? ಜೇನುಗೂಡಿನ ವಿಶೇಷ ಚಿತ್ರವೇ? ನಿಮಗೆ ಉತ್ತರ ತಿಳಿದಿದ್ದರೆ ಬರೆದು ಕಳಿಸಿ.

ಕಳೆದ ವಾರ (ಜೂನ್ 30) ಕಣಕದಲ್ಲಿ ಪ್ರಕಟವಾಗಿದ್ದ ಚಿತ್ರ–ವಿಶೇಷದ ಉತ್ತರ

ಕ್ಯೂ.ಆರ್.ಕೋಡ್. ಇತ್ತೀಚೆಗೆ ಇದನ್ನು ನೀವು ಹಲವು ಕಡೆ ಕಂಡಿರಬಹುದು. ಪುಸ್ತಕಗಳಲ್ಲಿ. ಪತ್ರಿಕೆಗಳಲ್ಲಿ, ಜಾಹೀರಾತಿನಲ್ಲಿ. ಆಹಾರದ ಪ್ಯಾಕೆಟ್ಟುಗಳ ಮೇಲೆ ಹೀಗೆ ಹತ್ತು, ಹಲವು ಕಡೆ ಇದನ್ನು ಬಳಸಲಾಗುತ್ತಿದೆ. ಸರಳವಾಗಿ ಹೇಳುವುದಾದರೆ ಇದು ಬಾರ್‌ಕೋಡ್‌ನ ಹೊಸ ಅವತಾರ. ಬಾರ್‌ಕೋಡ್ ಗೊತ್ತಲ್ಲ? ಒಂದೇ ರೀತಿಯ ಸಾವಿರಾರು ವಸ್ತುಗಳಿದ್ದರೆ, ಅವನ್ನು ಒಂದೊಂದನ್ನೂ ಗುರುತಿಸಲು ಬಳಸುವ ವಿಶಿಷ್ಟ ಸಂಕೇತ. ಕ್ಯೂ. ಆರ್. ಕೋಡ್ ಎಂದರೆ ಕ್ವಿಕ್ ರೆಸ್ಪಾನ್ಸ್ ಕೋಡ್ ಎಂದರ್ಥ. ಅಂದರೆ ಕ್ಷಿಪ್ರವಾಗಿ ಪ್ರತಿಕ್ರಿಯಿಸಲು ಇದು ನೆರವಾಗುತ್ತದೆ ಎಂದಷ್ಟೆ. ಇಪ್ಪತ್ತು ವರ್ಷಗಳ ಹಿಂದೆ ಜಪಾನಿನ ಆಟೋಮೊಬೈಲ್ ಕಂಪೆನಿಯೊಂದರಲ್ಲಿ ಕಾರಿನ ವಿವಿಧ ಭಾಗಗಳನ್ನು ಗುರುತಿಸಿ, ಅವುಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ಇಡಲು ಈ ಕೋಡನ್ನು ಬಳಸಲಾಗಿತ್ತು. ಇಂದು ಇದು ಸರ್ವಾಂತರ್ಯಾಮಿ. ಇದರ ಬಳಕೆಯೂ ಸುಲಭ. ನಿಮ್ಮ ಸ್ಮಾರ್ಟ್‌ಫೋನ್ ಅನ್ನು ಇದರತ್ತ ತಿರುಗಿಸಿ ಒಂದು ಚಿತ್ರ ತೆಗೆದರೆ ಸಾಕು. ಈ ಕೋಡ್ ಯಾವ ವಸ್ತುವಿನದ್ದು? ಆ ವಸ್ತುವಿನ ಬಗ್ಗೆ ಏನೇನು ವಿವರಗಳಿವೆ ಎನ್ನುವುದೆಲ್ಲವೂ ನಿಮ್ಮ ಫೋನ್‌ನಲ್ಲಿ ತೆರೆದುಕೊಳ್ಳುತ್ತವೆ. ಕ್ಯಾಮೆರಾ, ಕ್ಯೂ.ಆರ್.ಕೋಡ್‌ನ ಮಾಹಿತಿ ಸಂಗ್ರಹಣ ಸಾಮರ್ಥ್ಯ ಮತ್ತು ಸ್ಮಾರ್ಟ್‌ಫೋನ್ ಒದಗಿಸುವ ಅಂತರಜಾಲ ಸಂಪರ್ಕದ ಅನುಕೂಲತೆಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುತ್ತದೆ ಈ ವ್ಯವಸ್ಥೆ. ನಿಮ್ಮ ಬಗ್ಗೆ ಎಲ್ಲ ವಿವರಗಳನ್ನೂ ಒದಗಿಸುವ ಬದಲಿಗೆ, ನಿಮ್ಮ ಚಿತ್ರದ ಜೊತೆಗೆ ನಿಮ್ಮ ವಿವರಗಳಿರುವ ವೆಬ್ ತಾಣವನ್ನು ಪ್ರತಿನಿಧಿಸುವ ಕ್ಯೂ. ಆರ್.ಕೋಡ್ ನೀಡಿದರೆ ಸಾಕು. ಈ ಕೋಡ್ ಅನ್ನು ಚಿತ್ರಿಸುವವರಿಗೆ ನಿಮ್ಮ ಚಿತ್ರವಷ್ಟೆ ಅಲ್ಲ, ಜಾತಕವೂ ತೆರೆದುಕೊಳ್ಳುತ್ತದೆ. ಪ್ರತ್ಯೇಕವಾಗಿ ಇಂಟರ್‌ನೆಟ್ ಸಂಪರ್ಕಿಸಬೇಕಾದ, ಅಲ್ಲಿ ನಿಮಗೆ ಬೇಕಾದ ವೆಬ್ ತಾಣದ ವಿಳಾಸ ಹಾಗೂ ಇತರೆ ವಿವರಗಳನ್ನು ನೀಡಬೇಕಾದ ಕಷ್ಟವಿಲ್ಲ. ಇದುವೇ ಈ ಕೋಡ್‌ನ ಅನುಕೂಲತೆ.

ನಿಮ್ಮಲ್ಲಿಯೂ ಇಂತಹ ಚಿತ್ರ–ವಿಶೇಷಗಳಿದ್ದರೆ ನಮಗೆ ಕಳಿಸಿ. ವಿಳಾಸ: ಕಣಕ, ಕನ್ನಡ ಜನಮನ, 834, ಕಂಠೀ ಸಂಕೀರ್ಣ (2ನೇ ಮಹಡಿ), ನ್ಯೂ ಕಾಂತರಾಜ ಅರಸು ರಸ್ತೆ, ಕುವೆಂಪು ನಗರ, ಮೈಸೂರು – 570 023; ಈ–ಮೇಲ್: super.janamana@gmail.com.

ಉಚ್ಚೆಕೊಳ್ಳೋಕೆ ಎಲ್ರಿಗೂ ಒಂದೇ ಟೈಮು

ಅಲ್ರಪ್ಪೋ. ಒಂದಾ ಮಾಡ್ಬನ್ರೋ ಅಂತ ಬುಟ್ರೆ ಒಂದ್ಗಂಟೆ ಆದ ಮ್ಯಾಕೆ ಬರ್ತೀವ್ರಲ್ಲ? ಕ್ಯೋಳಿದ್ರೆ 'ತುಂಬಾ ಅಂಸರ ಆಗಿತ್ತು ಸಾ. ಅದ್ಕೆ ಒತ್ತಾಯ್ತು ಅಂತೀರಲ್ರಪ್ಪೋ?' ಉಚ್ಕೋಳಾಕೆ ಎಸ್ಟೊತ್ತು ಬೇಕಾತ್ತೈತೆ ಅಂತ ನಂಗೆ ಗೊತ್ತಿಲ್ಲ ಅಂದ್ಕಂಡ್ರಾ? ಅಬ್ಬಬ್ಬಾ ಅಂದ್ರೆ ಅರ್ದ ನಿಮ್ಸದಾಗೆ ಇರೋ ಉಚ್ಚೆ ಎಲ್ಲ ಕಾಲಿ ಆಗೋಗ್ತೈತೆ. ನೀವು ನ್ವಾಡಿದ್ರೆ ಒಂದು ಗಂಟೆ ತಕಂಡ್ರಲ್ಲ. ಆಂ. ನಾನು ಸುಮ್ನುಮ್ಮೆ ಅಂಗೇಳ್ನಿಲ್ಲ. ಅದ್ಯಾವ ಪ್ರಾಣೀನೇ ಆಗ್ಲಿ, ಎಸ್ಟೇ ಅವಂಸ್ರ ಆಗ್ಲಿ, ಇರೋ ಉಚ್ಚೇನೆಲ್ಲ ಬರೇ ಇಪ್ಪತ್ತು ಸೆಕೆಂಡ್ನಾಗೇ ಕಾಲಿ ಮಾಡ್ಕಂಬುಡುತ್ತಂತೆ. ನಿಮ್ಮಂಗೆ ಗಂಟೆಗಟ್ಲೆ ತಗಳಲ್ಲ ಅಂತ ಜಾರ್ಜಿಯಾ ಇಸ್ವವಿದ್ಯಾನಿಲಯದ ಇಗ್ನಾನಿ ಡೇವಿಡ್ ಹೂ ಮೊನ್ನೆ ಏಳವ್ರೆ ಗೊತ್ತಾ?

ಔದ್ರಲಾ. ಅವೇನೂ ಉಚ್ಚುಚ್ಚಾಗಿ ಇದನ್ನ ಯೋಳಿಲ್ಲ. ಇಲ್ಲ ಯಾವ್ದೋ ಕುನ್ನೀನೋ, ಬೆಕ್ಕೋ ಉಚ್ಚಕಳಾದು ಕಂಡು ಮಾತಾಡ್ನಿಲ್ಲ. ಮೂವತ್ತು ಪ್ರಾಣಿಗಳು ಉಚ್ಚೆ ಎಂಗೆ ಉಯ್ತಾವೆ. ಎಸ್ಟು ಒತ್ತು ತಗಳ್ತಾವೆ ಅಂತ ಪೋಟೋ ತಕ್ಕಂಡು ಪರೀಕ್ಸೆ ಮಾಡವ್ರಂತೆ. ಎಚ್ಚು ಅಂದ್ರೆ ಇಪ್ಪತ್ತು ಸೆಕೆಂಡೊಳಗೆ ಎಲ್ಲಾ ಕಾಲಿ ಆಗೋಯ್ತದೆ ಅಂತ ಯೇಳ್ತವ್ರೆ.

ಅದೆಂಗಪಾ? ಆನೇನೂ ಒಂದೇಯಾ, ಇರುವೇಯಾ ಒಂದೇಯಾ? ಆನೆ ಉಚ್ಚಕೋ ಬ್ಯಾಕಾದ್ರೆ ಇಸ್ಟೇ ಸಾಕಾ? ಅನ್ಮಾನಾ ಬ್ಯಾಡ ಕಂಡ್ರಲಾ. ಆನೇಗೂ ಅಸ್ಟೇಯೇ? ಬೆಕ್ಕಿಗೂ ಅಸ್ಟೇಯೇ ಅಂತೆ. ನಂಬಕ್ಕಾಗಕ್ಕಿಲ್ಲ ಅಲ್ಲವ್ರ. ಆನೆ ಅಂದ್ರೆ ಸುಮ್ನೇನಾ? ಬ್ಯಾಸ್ಗನಾಗೆ ಕೆಆರ್‌ಎಸ್ ನಿಂದ ತಮಿಳ್ನಾಡಿಗೆ ನೀರು ಬುಟ್ಟಂಗೆ ಉಚ್ಕಂತದೆ. ಒಂದ್ಸಾರಿ ಉಚ್ಕಂಡ್ರೆ ಒಂದು ಕೊಪ್ಪರಿಗೆ ಒಂದಾ ಮಾಡ್ತದೆ. ಅದಕ್ಕೂ ನಮ್ಮೂರ ನಲ್ಲಿನಾಗೆ ನೀರು ಬರೋ ಆಗೆ ಉಚ್ಚಕಳೋ ಬೆಕ್ಕಿಗೂ ಸಮಾನಾ ಅನ್ನಬ್ಯಾಡಿ. ದಿಟವಾಗಲೂ ಇಂಗೇ ಆಗ್ತದಂತೆ. ಯಾಕಂದ್ರೆ. ಉಚ್ಚಕಳಾದು ಒಂತರಾ ತೂತು ಮಡಕೆಯಿಂದ ನೀರು ಸೋರ್ದಾಗೆ ಅಂತ ಈ ಇಗ್ನಾನಿಗಳು ಅಂತಾರೆ.

ಔದ್ರಲಾ. ನಾನೂವೆ, ಒಂದಾ ಮಾಡಾದು ಅಂದ್ರೆ ಒತ್ತರಿಸಿ ಉಚ್ಚಕಳಾದು ಅಂತ ಅಂದ್ಕಂಡಿದ್ದೆ. ಉಚ್ಚೆ ಎಲ್ಲ ಸೇರ್ಕಂಡು ಒತ್ತರಿಸದಾಗ ರೊಂಯ್ ಅಂತ ಬಿಚ್ಕತದೆ. ಅಂದ್ರೆ ಒಳಾಗೆ ಎಸ್ಟು ಪ್ರೆಸರು ಬರತಾದೋ ಅಸ್ಟು ಜೋರಾಗಿ ಉಚ್ಚೆ ಬರ್ತದೆ ಅಂತ ಅಂದ್ಕಂಡಿದ್ದೆ. ಈಗ ಇವ್ರು ಏಳಾದು ನೋಡಿದ್ರೆ, ಒಳಗೆ ಪ್ರೆಸರು ಏನೇ ಇರಲಿ, ಉಚ್ಚಕಳಾ ಟೈಮು ಮಾತ್ರ ಒಂದೇಯ.

ಆಂ. ಅದೆಂಗಪ್ಪ? ಆನೇ ಬಲಾನೂ, ಕುನ್ನಿ ಬಲಾನೂ ಒಂದೇ ಎಂಗಾಯ್ತದೆ? ಎರಡೂ ಒತ್ತರಿಸ್ಕಂಡ್ರೆ ಆನೇ ಬಲ ಜಾಸ್ತಿ ಅಲ್ಲವ್ರ? ನಿಜ ಕಣ್ರಪಾ. ಅಂಗೇ ಅನ್ಸತದೆ. ಆದ್ರೂನೂ ಉಚ್ಚಕಳಾಕೆ ಬ್ಯಾಕಾಗೋ ಟೈಮು ಒಂದೇಯಂತೆ. ಯಾಕಂದ್ರೆ, ಆನೆ ಮತ್ತೆ ನಾಯಿಯ ಅಂಗ ಒಂದೇ ಉದ್ದ ಇರಾಕಿಲ್ಲ. ಅದಕ್ಕೆ ಇಂಗೆ ಅಂತ ಇವ್ರು ಯೋಳ್ತಾರೆ. ಅಂದ್ರೆ ದೊಡ್ಡ ಟ್ಯಾಂಕಿ, ಸಣ್ಣ ಟ್ಯಾಂಕಿಲಿ ಇರೋ ನೀರ್ನ ಕಾಲಿ ಮಾಡಾಕೆ ಒಂದೇ ಟೈಮಾ? ಔದಂತೆ. ದೊಡ್ಡ ಟ್ಯಾಂಕೀಗೆ ದೊಡ್ಡ ಪೈಪು, ಸಣ್ಣ ಟ್ಯಾಂಕೀಗೆ ಸಣ್ಣ ಪೈಪು ಆಕ್ಬುಟ್ಟರೆ ಎರಡ್ನೂ ಒಂದೇ ಟೈನಾಗೆ ಕಾಲಿ ಮಾಡಬೈದು. ಅಂಗಂತ ಇವ್ರು ಮೂರು ಟ್ಯಾಂಕಿ ನೀರಿಟ್ಟು, ಬ್ಯಾರೆ ಬ್ಯಾರೆ ದಪ್ಪ, ಉದ್ದದ್ದು ಪೈಪು ಆಕಿ ಪರೀಕ್ಸೆ ಮಾಡವ್ರೆ. ಎಲ್ಲಾ ಟ್ಯಾಂಕಿ ಕಾಲಿ ಆಗಕ್ಕೂ ಒಂದೇ ಟೈಮು ಸಾಕಾಯ್ತಂತೆ.

ಬುಡಿಸಾ. ಉಚ್ಚಕಳಾಕೆ ಎಸ್ಟು ಟೈಂ ಆದ್ರೂ ಆಗ್ಲಿ, ನಮ್ಮ ಪ್ಯಾಟೇಲಿ ಒಂದಾ ಮಾಡಕ್ಕೆ ಗಂಟೆನಾದ್ರೂ ಬ್ಯಾಕು. ಯಾಕಂದ್ರೆ ಸರಿಯಾದ ಜಾಗ ಉಡ್ಕಬ್ಯಾಕಲ್ಲ.

— ಹಳ್ಳಿ ಮೇಷ್ಟ್ರು





ಹೈಕ್ಳ ಪಾಠ

ದಿನ ಭವಿತವ್ಯ

ಜುಲೈ 7 ಸೋಮವಾರ ಶ್ರೀಜಯನಾಮಸಂವತ್ಸರ, ಉತ್ತರಾಯಣೆ, ಗ್ರೀಷ್ಮ ಋತು ಆಷಾಢಮಾಸ, ಶುಕ್ಲ ಪಕ್ಷ, ದಶಮಿತಿಥಿ, ಸ್ವಾತಿ ನಕ್ಷತ್ರ, ಸಿದ್ಧಿನಾಮಯೋಗ, ತೈತುಲ ಕರಣ, ಮಿಥುನ ಮಾಸತೇದಿ 23, ಪುನರ್ವಸು ನಕ್ಷತ್ರ 1ನೇ ಪಾದ ರಾಹುಕಾಲ 7–40 ರಿಂದ 9–16, ಗುಳಿಕಕಾಲ 2–04ರಿಂದ 3–40, ಅರ್ಧಪ್ರಹಾ ಕಾಲ 9–16ರಿಂದ 10–52 ಯಮಗಂಟಕ ಕಾಲ 10–52ರಿಂದ 12–28 ಸೂರ್ಯೋದಯ ಬೆಳಗ್ಗೆ 6–04, ಅಸ್ತ ಸಂ–6–51.

ಮೇಷ: ಸಾತ್ವಿಕ ಭಾವನೆಯಿಂದ ಕೂಡಿ ಎಲ್ಲರನ್ನೂ ಆಕರ್ಷಿಸಲಿದ್ದೀರಿ. ಆಸೆ ಆಕಾಂಕ್ಷೆಗಳು ನೆರವೇರುತ್ತವೆ.

ವೃಷಭ: ಬುದ್ಧಿ ಬಲ ವೃದ್ಧಿಯಾಗಲಿದೆ ಉತ್ತಮ ಬಾಂಧವ್ಯಗಳ ನಡುವೆ ಕಾರ್ಯಸಾಧಿಸಲು ಮಿತ್ರರ ಸಹಕಾರವಿದೆ.

ಮಿಥುನ: ಹಣಕಾಸಿನ ಬಿಕ್ಕಟ್ಟು ಮನೋವ್ಯಾಕುಲಕ್ಕೆ ಕಾರಣವಾಗಿದೆ. ವಾದ ವಿವಾದಗಳಿಂದ ಪ್ರಯೋಜನವಿಲ್ಲ ತಾಳ್ಮೆ ಕಳೆದುಕೊಳ್ಳಬೇಡಿ.

ಕಟಕ: ಆರೋಗ್ಯದ ಕಡೆ ಲಕ್ಷ್ಯ ಕೊಡಿ. ಊಟೋಪಚಾರಗಳಲ್ಲಿ ಎಚ್ಚರವಿರಲಿ. ಚಾಡಿಕೋರ ಮಾತಿಗೆ ಕಿವಿಗೊಡಬೇಡಿ.

ಸಿಂಹ: ಸಾಂಪತ್ತಿಕ ಸ್ಥಿತಿಗತಿ ಸುಧಾರಣೆಯಾಗಲಿದೆ. ವಿನೂತನ ಕಾರ್ಯಕ್ರಮಗಳಿಂದ ಮೆಚ್ಚುಗೆಗಳಿಸುತ್ತೀರಿ.

ಕನ್ಯಾ: ವ್ಯಾಪಾರ ವ್ಯವಹಾರಗಳಲ್ಲಿ ಅನುಕೂಲವಿದೆ. ದುರ್ಜನರ ಮಾತಿಗೆ ಕಿವಿಗೊಡಬೇಡಿ.

ತುಲಾ: ಅತಿಯಾದ ನಂಬಿಕೆಯಿಂದ ವ್ಯವಹಾರದಲ್ಲಿ ಭಾರೀ ನಷ್ಟ. ಕಹಿ ಅನುಭವಗಳಿಂದ ಸರಿದಾರಿಯಲ್ಲಿ ನಡೆಯಲಿದ್ದೀರಿ.


ವೃಶ್ಚಿಕ: ಹೆಚ್ಚಿನ ಹಣಕಾಸಿನ ಖರ್ಚುಗಳು ಉದ್ಯೋಗದಲ್ಲಿ ಕಿರಿಕಿರಿ ಸಂಪಾದಿಸಿದ ಹೆಸರನ್ನು ಕೆಡಿಸುವ ಜನರಿದ್ದಾರೆ.

ಧನುಸ್ಸು: ಈ ದಿನ ವಿಶೇಷವಾದ ಧನಲಾಭವೂ, ಬಂಧು ಮಿತ್ರರ ಸಹಕಾರವೂ ಶುಭ ಕಾರ್ಯನಕೂಲವೂ ಉಂಟಾಗಲಿದೆ.

ಮಕರ: ಬಂಧುಮಿತ್ರ ಬೇಟಿ ವಿವಾಹ ಸಭೆ ಸಮಾರಂಭಗಳಲ್ಲಿ ಪಾಲ್ಗೊಳ್ಳುವಿರಿ.

ಕುಂಭ: ಪ್ರಯಾಣದಿಂದ ಆಯಾಸ, ನಿಷ್ಠೂರ, ಸ್ತ್ರೀ ನಿಮಿತ್ತವಾದ ಹಣದ ಖರ್ಚುಗಳು ನಾಳಿನ ಬದುಕು ಸುಂದರ.

ಮೀನ: ಮಕ್ಕಳ ನಡವಳಿಕೆ ಬೇಸರ ತರುತ್ತದೆ. ಕೆಲಸಕಾರ್ಯಗಳು ಮಂದಗತಿಯಲ್ಲಿ ನಡೆಯುತ್ತವೆ.



ರಮೇಶನ್ ಕಶ್ಯಪ
ಮೊ. ನಂ. 9740662363